## ಪ್ರಬಂಧ

ಮಲ್ಲೀಗಿ ಮುಡಿವ ಸೊಸಿ ಬರಲಿ

ಎನ್ನುವುದು ಅದು ಕಥಾ ಹಾರೈಕೆ! ತಾಲೂಕು ಸಾಹಿತ್ಯ ಸಮ್ಮೇಳನ ಸಂದರ್ಭದಲ್ಲಿ ಅಧ್ಯಕ್ಷನ ಮೆರವಣಿಗೆಗೆಂದು ನನ್ನ ಕೈ ಹಿಡಿದು ಸಾಲಂಕೃತ ಟ್ರಾಕ್ಟರ್ ಹತ್ತಿಸಿದಾಗ ಈ ಜನಪದ ತ್ರಿಪದಿ ಮತ್ತೆ ನೆನಪಾಯಿತು. ಈಗ ನಮ್ಮ ತಾಯಿ ಭಾಷೆ ಕನ್ನಡದಲ್ಲಿ ಏನುಂಟು ಏನಿಲ್ಲ ಹೇಳಿರಿ. ಅನ್ನ- ಸ್ಥಾನ- ಮಾನ ನೀಡಿ ಎತ್ತಿ ಹಿಡಿದು ಕಾಪಾಡಿದ ನನ್ನ ತಾಯಿ ಭಾಷೆಗೆ ನಾನು ಚಿರಋಣಿ. ಕನ್ನಡಿಗರ ಆ ಔದಾರ್ಯಕ್ಕೆ ಬೆರಗಾಗಿ ನಿಂತಿದ್ದೇನೆ. ಅಕ್ಷರಕ್ಕೆ ಅದೆಂಥಾ ದಿವ್ಯ ಶಕ್ತಿಯಿದೆ ಅನ್ನುವುದಕ್ಕೆ ನನಗೆ ನಾನೇ ಮಾದರಿ.

ಆಧುನಿಕ ಜಗತ್ತಿನಲ್ಲಿ ಮನಸುಗಳು ಗೊಂದಲದ ಗೂಡಾಗುತ್ತಿರುವ ಇವತ್ತಿನ ವಿಷಾದ ಪರ್ವದಲ್ಲಿ ಅಂಬಿಕಾತನಯದತ್ತರ ಕವನ ಆ 'ಬಿಚ್ಚ ಮಾತು' ಮತ್ತೆ ಮತ್ತೇ ಮನಸ್ಸಿನೊಳಗೆ ಗುದ್ದಿಕೊಂಡು ನೆನಪಾಗುತ್ತಿದೆ-

ಒಬ್ಬರನ ಕಂಡರ ಒಬ್ಬರ ಮನಸು
ಅಬ್ಬರ ತುಬ್ಬರs ಆಗತೈತಿ
ಇಬ್ಬರೂ ಕೂಡಿ ಬದುಕಿನ ಹಬ್ಬ ಮಾಡಿಲ್ಲ
ಭರಪೂರ
ಸಬ್ಬರಂಗs ಕಾಣತೇವಿ
ಮಬ್ಬಿನ್ಯಾಗ ಬಾಳತೇವಿ
ಉಬ್ಬಿನ್ಯಾಗs ಸೋರಿ ಹೋತ್ರಿ ಒಳಗಿನ
ಮಜಕೂರ!

ಮತ್ತೆ ಹತ್ತು ವರ್ಷ ಕಳೆದು, ಊರಿಂದ ಕರೆತಂದಿದ್ದ ಅವ್ವ ಮತ್ತು ತಂಗಿಯರನ್ನು ಮೆಜೆಸ್ಟಿಕ್ ರಸ್ತೆ ದಾಟಿಸುವಾಗ, ಅವ್ವ 'ಇದೇನಪಾ ಇದು, ಈಪಾಟಿ ಮಂದಿ. ಈ ಊರಾಗ ಇವತ್ತು ಜಾತ್ರಿ ಐತೇನು' ಎಂದು ಕೇಳಿದ್ದಕ್ಕೆ, 'ಇಲ್ಲಿ ದಿನಾನೂ ಜಾತ್ರಿ ಸೇರತೈತಿ, ಬಾರ ಬೇ' ಎಂದು ಹೇಳಿದ್ದೆ. ಹೌದು, ಈ ಜಾತ್ರೆಯಲ್ಲಿ ತಪ್ಪಿಸಿಕೊಂಡಿದ್ದೇನೆ, ನನಗೆ ನಾನೇ!

ಆದರೂ ಕನ್ನಡದಲ್ಲಿ ಏನುಂಟು ಏನಿಲ್ಲ! ಕನ್ನಡವೇ ನನ್ನ ತಾಯಿ ತಂದೆ. ನನಗೆ ಅನ್ನ - ಸ್ಥಾನ - ಮಾನ ನೀಡಿ ಕಾಪಾಡಿದ್ದು ಸುಳ್ಳಲ್ಲ. ಕನ್ನಡವನ್ನು ನಂಬಿ ಕೆಟ್ಟೆ ಎಂದು ಹೇಳಿದರೆ ಧೂರ್ತತನವಾದೀತು ಬರಗಾಲದ ಬಾಲ್ಯದಲ್ಲಿ ಅಕ್ಷರಶಃ ಈಚಲ ಹಣ್ಣು - ಚಳ್ಳೆ ಹಣ್ಣು ತಿಂದು ಬೆಳೆದವನಿಗೆ ಈಗ ಖರ್ಜೂರ ಮೇಯುವ ಅವಕಾಶವಿದೆ. ಕೂಳುಬಾಕನಾಗಿದ್ದವ ಈಗ ಕೊಳ್ಳುಬಾಕ. ಆದರೇನು? ಈಗ ಅನುಭವಿಸಲು ಆರೋಗ್ಯ ಬೇಕಷ್ಟೇ.

ಗಾಳಿಯಲ್ಲಿ ಹಾರಿ ಬಂದ ರದ್ದಿ ಪೇಪರ್ ತುಂಡೂ ಬಿಡದೆ ಓದುವ ಭಯಂಕರ ಹಸಿವಿತ್ತು. ಬಾಲ್ಯದಲ್ಲಿ ಪುಸ್ತಕಗಳಿಗಾಗಿ ತಡಕಾಡುತ್ತಿದ್ದೆ. ಈಗ ಪುಸ್ತಕಗಳು ಮನೆ ಬಾಗಿಲಿಗೇ ಹುಡುಕಿಕೊಂಡು ಬರುತ್ತವೆ. ಆದರೆ, ಓದುವ ಕಸುವಿಲ್ಲದಂತಾಗಿದೆ. ಇದೇನಾಶ್ಚರ್ಯ. ಬದುಕಿನ ಉಸಾಬರಿಯೆಂದರೇನೇ ಇಂಥ ವಿರೋಧಾಭಾಸಗಳ ಕಂತೆಯೇನೋ! ನಮ್ನಮ್ಮ ಹಳ್ಳಿಗಳಲ್ಲೇ ಬಿಟ್ಟು ಬಂದ ಸುಖವನ್ನು ಈಗ ಈ ಮಹಾ ನಗರದ ಗಲ್ಲಿ ಬಡಾವಣೆಗಳಲ್ಲಿ ಅರಸುತ್ತಿದ್ದೇವೆ. ಹಳ್ಳೀಮನೆ, ರೊಟ್ಟೀಮನೆ, ಗೌಡರ ಮನೆಯ ಮುದ್ದೆ ಊಟದ ಮನೆಗಳಲ್ಲಿ ಹುಚ್ಚು ಹಿಡಿದವರಂತೆ ಹುಡುಕುತ್ತಿದ್ದೇವೆ. ಕಳೆದುಕೊಂಡ ಹಳ್ಳೀ ತೋಟವನ್ನು ನಗರದ ಕಾಂಕ್ರೀಟ್ ಕಾಡಿನಲ್ಲಿ ಹುಡುಕುತ್ತಿದ್ದೇವೆ. ಇದೆಂಥಾ ವಿಭ್ರಮೆ!

ಸದಾ ಕಟ್ಟೆಯ ಮೇಲೆ ಕೂತು ತಮ್ಮ ಕೊನೆಯ ದಿನಗಳನ್ನು ಎಣಿಸುತ್ತಿದ್ದ ಅಪ್ಪ ಹೇಳುತ್ತಿದ್ದ ಮಾತು ಗುದ್ದಿಕೊಂಡು ನೆನಪಾಗುತ್ತಿದೆ- 'ಹಳ್ಳಿ ಹಟ್ಟರೇನೆ ಪಟ್ಟಣ ಬಸುರಾಗುವುದು' ಎಂದು. ಆಡು ಭಾಷೆ ತುಸು ಒರಟಾದರು ಅದೆಂಥಾ ಕಟು ವಾಸ್ತವ! ಎಲ್ಲ ಕಾಲಕ್ಕೂ ಸಲ್ಲುವಂಥದ್ದು. ತರಕಾರಿ ಹೇರಿಕೊಂಡು ಸಂತೆಗೆ ಹೋದ ಎತ್ತಿನ ಗಾಡಿಯನ್ನು ಹಿಂಬಾಲಿಸಿಕೊಂಡು ಹೋದ ನಾಯಿ, ಸಂಜೆಯ ಹೊತ್ತಿಗೆ ಗಾಡಿ ಹಳ್ಳಿಗೆ ವಾಪಸ್ಸಾದರೂ ಅದು ಮಾತ್ರ ಪೇಟೇಯಲ್ಲೇ ಉಳಿಯಿತಂತೆ. ಎರಡೂ ಕಡೆ ಸಲ್ಲಲಿಲ್ಲ. ಅಂತೆಯೇ ಇಲ್ಲಿನ ಸಂತೆಯ ಗದ್ದಲದಲ್ಲಿ ಮತ್ತೆ ಕಳೆದು ಕೊಂಡಿದ್ದೇನೆ, ನನ್ನನ್ನು ನಾನೇ!

ಅರಿವೇ ಗುರು ನುಡಿ ಜ್ಯೋತಿರ್ಲಿಂಗ
ದಯವೇ ಧರ್ಮದ ಮೂಲ ತರಂಗ
ವಿಶ್ವ ಭಾರತಿಗೆ ಕನ್ನಡದಾರತಿ
ಮೊಳಗಲಿ ಮಂಗಲ ಜಯಭೇರಿ

ಚೆನ್ನವೀರ ಕಣವಿ